ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 26–6–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | **ಪಡಸಾಲೆ ತಿಂಗಳ ಚಿತ್ರ:**<br>ಉದ್ಘಾಟನೆ:<br>ಡಾ. ಮನುಬಳಿಗಾರ್,<br>ಸಾಹಿತಿಗಳು,<br>ಅಧ್ಯಕ್ಷತೆ:<br>ಡಾ. ಎಂ.ಎಸ್. ಮೂರ್ತಿ, ಅಧ್ಯಕ್ಷರು,<br>ಕರ್ನಾಟಕ ಲಲಿತಕಲಾ ಅಕಾಡೆಮಿ | 27–6–2015<br>ಶನಿವಾರ ಬೆಳಿಗ್ಗೆ<br>11–00 ಗಂಟೆಗೆ | ಪಡಸಾಲೆ ಆರ್ಟ್ ಗ್ಯಾಲರಿ,<br>ರವೀಂದ್ರ ಕಲಾಕ್ಷೇತ್ರ ಆವರಣ,<br>ಜೆ.ಸಿ. ರಸ್ತೆ. ಬೆಂಗಳೂರು. |

ನಿರ್ದೇಶಕರ ಪರವಾಗಿ

# *ಮಾಧ್ಯಮದವರ ಗಮನಕ್ಕೆ*

ಕಳೆದ ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಮಾಧ್ಯಮ ಸಂಸ್ಥೆಗಳಿಗೆ ವಸತಿ, ಹಂಚಿಕೆ ಮಾಡಿರುವಂತೆಯೇ ಈ ಬಾರಿಯೂ ವಸತಿ ಸೌಲಭ್ಯವನ್ನು ಹಂಚಿಕೆ ಮಾಡಲಾಗಿದೆ.

## ವಿದ್ಯುನ್ಮಾನ ಮಾಧ್ಯಮ:

ಸ್ಥಳ ಅಭಾವದ ಹಿನ್ನೆಲೆಯಲ್ಲಿ ಈಗಾಗಲೇ ನೋಂದಾಯಿಸಿರುವ ಸುದ್ದಿ ವಾಹಿನಿಗಳಿಗೆ ಗರಿಷ್ಠ 2 ಹಾಸಿಗೆಯುಳ್ಳ ಐದು ಕೊಠಡಿಗಳನ್ನು ಹಂಚಿಕೆ ಮಾಡಲು ಬೆಳಗಾವಿ ಜಿಲ್ಲಾಡಳಿತ ನಿರ್ಧರಿಸಿದೆ. ಅಗತ್ಯವಿರುವ ಪ್ರಕರಣಗಳಲ್ಲಿ ಮತ್ತೊಂದು ಹಾಸಿಗೆಯನ್ನು ಒದಗಿಸಲು ತೀರ್ಮಾನಿಸಲಾಗಿದೆ. ಅಂದರೆ ರಾಜ್ಯದ ಪ್ರಮುಖ ಸುದ್ದಿವಾಹಿನಿಗಳ ಪ್ರತಿನಿಧಿಗಳಿಗೆ ಐದು ಕೊಠಡಿಗಳಲ್ಲಿ ಗರಿಷ್ಠ 15 ಹಾಸಿಗೆಗಳು ಲಭ್ಯವಿರುತ್ತದೆ.

## ಮುದ್ರಣ ಮಾಧ್ಯಮ:

ರಾಜ್ಯದ ಪ್ರಮುಖ ದಿನ ಪತ್ರಿಕೆಗಳಿಗೆ ಗರಿಷ್ಠ 2 ಹಾಸಿಗೆಯುಳ್ಳ 2 ಕೊಠಡಿಯನ್ನು ಹಂಚಿಕೆ ಮಾಡಲಾಗುವುದು. ಅವಶ್ಯಕತೆಯಿರುವ ಪ್ರಕರಣಗಳನ್ನು ಆಧಾರಿಸಿ ಮತ್ತೊಂದು ಹಾಸಿಗೆಯನ್ನು ಒದಗಿಸಲಾಗುವುದು. ಅಂದರೆ ಈಗಾಗಲೇ ನೋಂದಾಯಿತ ದಿನಪತ್ರಿಕೆಗಳ ಪ್ರತಿನಿಧಿಗಳಿಗೆ ಗರಿಷ್ಠ ಆರು ಹಾಸಿಗೆಗಳು ಲಭ್ಯವಿರುತ್ತದೆ.

ಈ ವಸತಿ ಸೌಲಭ್ಯವು ದಿನಾಂಕ 25-6-2015 ರೊಳಗೆ ನೋಂದಾಯಿಸಿರುವ ಮಾಧ್ಯಮ ಪ್ರತಿನಿಧಿಗಳಿಗೆ ಮಾತ್ರ ಲಭ್ಯ. ದಿನಾಂಕ: 28-6-2015 ರ ಬೆಳಿಗ್ಗೆ 8-00 ಗಂಟೆಯ ನಂತರ ವಸತಿ ಸೌಲಭ್ಯವನ್ನು ಒದಗಿಸಲಾಗುವುದು. ವಸತಿ ಸೌಲಭ್ಯ ಹಂಚಿಕೆ ಕುರಿತಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಂತರ್ಜಾಲ ತಾಣ www.karnatakavarthe.org ನಲ್ಲಿ ದಿನಾಂಕ: 27-6-2015 ಸಂಜೆ 6-00 ಗಂಟೆಗೆ ಮಾಹಿತಿ ಲಭ್ಯವಿರುತ್ತದೆ.

## ಪತ್ರಿಕಾ ಪ್ರಕಟಣೆ

# ಮಾದಕ ವಸ್ತುಗಳ ಮಾಯಾಜಾಲಕ್ಕೆ ಒಳಗಾಗದಿರಲು ಕರೆ

ಬೆಂಗಳೂರು, ಜೂನ್ 26 (ಕರ್ನಾಟಕ ವಾರ್ತೆ)

ಮಾದಕ ವಸ್ತುಗಳ ಮಾಯಾಜಾಲಕ್ಕೆ ಒಳಗಾಗದಿರಲು, ಅವುಗಳ ಕಬಂಧ ಬಾಹುಗಳ ಹಿಡಿತಕ್ಕೆ ಸಿಕ್ಕದಿರಲು ಇರುವ ಸರಳ, ಸುಲಭ ಮಾರ್ಗವೆಂದರೆ ಮಾದಕ ವಸ್ತುಗಳನ್ನು ಹತ್ತಿರ ಬರಗೊಡದೆ ದೂರ ಇಡುವುದು. ಸಮಾಜದ ಒಳಿತು ಮತ್ತು ನೆಮ್ಮದಿಯನ್ನು ಬಯಸುವ ಎಲ್ಲರೂ, ಅದರಲ್ಲೂ ಯುವ ಜನಾಂಗ ಎಂತಹ ಆಕರ್ಷಣೆ, ಒತ್ತಡ, ಒತ್ತಾಸೆ ಬಂದರೂ ಮಾದಕವಸ್ತುವನ್ನು ಸೇವಿಸುವುದಿಲ್ಲ ಎಂಬ ದೃಢ ಸಂಕಲ್ಪವನ್ನು ಕೈಗೊಳ್ಳಬೇಕೆಂದು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ. ಹೋ. ಶ್ರೀನಿವಾಸಯ್ಯ ಅವರು ಕರೆ ನೀಡಿದರು.

ಗಾಂಧೀ ಭವನ ಆವರಣದಲ್ಲಿ ಇಂದು ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಇತರೆ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ವಿಶ್ವ ಮಾದಕವಸ್ತು ವಿರೋಧಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಾ, ಮದ್ಯಪಾನ ಹಾಗೂ ಮಾದಕ ವಸ್ತುಗಳು ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುತ್ತಿವೆ ಎಂದರು.

ಯುವ ಜನಾಂಗಕ್ಕೆ ಆರೋಗ್ಯ ಮತ್ತು ನೀತಿ ಪಾಠಗಳು ಪರಿಣಾಮಕಾರಿಯಾಗಿ ಇಲ್ಲದ ಕಾರಣ ಮನಸ್ಸು ನೆಮ್ಮದಿ ಕಾಣದೆ ಮಾದಕವಸ್ತು ಸೇವನೆಯಂತಹ ಕೆಟ್ಟ ಚಟಗಳತ್ತ ವಾಲುತ್ತಿವೆ. ಮನಸ್ಸಿನ ಸ್ವಾಸ್ಥ್ಯ ಕಾಪಾಡಲು ಯೋಗ್ಯ , ಧ್ಯಾನ, ಒಳ್ಳೆಯ ಪುಸ್ತಕ ಓದುವ ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಯೋಗ್ಯ ಮನಸ್ಸಿಗೆ ಶಕ್ತಿ ನೀಡುತ್ತದೆ ಮತ್ತು ದೇಹ ಮತ್ತು ಮನಸ್ಸನ್ನು ಒಗ್ಗೂಡಿಸುತ್ತದೆ ಎಂದರು.

ಮದ್ಯಪಾಮ ಸಂಯಮ ಮಂಡಳಿ ಅಧ್ಯಕ್ಷ ಎಂ.ಆರ್. ರಂಗಶಾಮಯ್ಯ ಅವರು ಮಾತನಾಡುತ್ತಾ, ಮಾದಕವಸ್ತುಗಳ ಆಕರ್ಷಣೆ, ಚೆಲ್ಲಾಟ ಅನಾದಿ ಕಾಲದಿಂದ ಇಂದಿನವರೆಗೂ ಮುಂದುವರೆದಿದೆ. ಮನುಷ್ಯನ ದು:ಖ ದುಮ್ಮಾನಗಳಿಗೆ ಮಾದಕವಸ್ತುಗಳು ಯಕ್ಷಿಣಿ ಪರಿಹಾರವೆಂಬ ಭ್ರಮೆ ಯುವ ಜನಾಂಗಕ್ಕೆ ಇದೆ. ಮಾದಕವಸ್ತುಗಳು ಅಮಲು ಏರಿಸಿ ನಿಧಾನಗತಿಯಲ್ಲಿ ಮನುಷ್ಯನನ್ನು ತಮ್ಮ ಅಕ್ಟೋಪಸ್ ಹಿಡಿತಕ್ಕೆ ಸಿಕ್ಕಿಸಿಕೊಂಡು ನಂತರ ಅಣು ಅಣುವಾಗಿ ಕೊಲ್ಲುತ್ತದೆ ಎಂದು ತಿಳಿಸಿದರು.

ವಾರ್ತಾ ಇಲಾಖೆಯ ಉಪ ನಿರ್ದೇಶಕ ಹೆಚ್. ಬಿ. ದಿನೇಶ್ ಅವರು ಮಾತನಾಡುತ್ತಾ, ಮಾದಕ ವಸ್ತು ಸೇವನೆ ಇತ್ತೀಚಿನ ದಿನಗಳಲ್ಲಿ ಅದರಲ್ಲೂ ಯುವ ಜನಾಂಗದಲ್ಲಿ ಹೆಚ್ಚುತ್ತಿದ್ದು, ಮನುಷ್ಯನ ಬದುಕಿಗೆ ಮಾರಕವಾಗಬಲ್ಲ ಮಾದಕವಸ್ತುಗಳ ವಿರುದ್ದದ ಹೋರಾಟ ಒಂದು "ಜನರ ಚಳುವಳಿ" ಯಾಗಬೇಕು ಎಂದು ಕರೆ ನೀಡಿದರು.

ನಾರ್ಕೋಟಿಕ್ ಕಂಟ್ರೋಲ್ ಬ್ಯೂರೋ ವಲಯ ಅಧಿಕಾರಿ ಸುನೀಲ್ ಕುಮಾರ್ ಸಿನ್ಹಾ ಅವರು ಮಾತನಾಡಿ, ಎಲ್ಲಿಯವರೆಗೆ ಮಾದಕವಸ್ತುಗಳಿಗೆ ಬೇಡಿಕೆ ಇರುತ್ತದೆಯೋ ಅಲ್ಲಿಯವರೆಗೆ ಮಾರಾಟಗಾರರು ಹಾಗೂ ಉತ್ಪಾದಕರು ಇದ್ದೇ ಇರುತ್ತಾರೆ ಎಂದ ಅವರು, ತಮ್ಮ ಸಂಸ್ಥೆಯ ಅಧಿಕಾರಿಗಳು ವಿವಿಧೆಡೆ ದಾಳಿ ನೆಡಸಿ ಮಾದಕವಸ್ತು ಉತ್ಪಾದನೆ ಮಾಡಲಾಗುತ್ತಿದ್ದ ಹಲವು ಘಟಕಗಳನ್ನು ಮುಚ್ಚಿದ್ದು, ಹಲವರನ್ನು ಈ ಸಂಬಂಧ ಬಂಧಿಸಲಾಗಿದೆ ಎಂದ ಅವರು, ಇಲ್ಲಿಯವರೆಗೆ 20 ಕೋಟಿ ರೂ.ಗಳಿಗೂ ಹೆಚ್ಚಿನ ಮಾದಕವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ನಿಮ್ಹಾನ್ಸ್ ಸಂಸ್ಥೆಯ ಮುಖ್ಯಸ್ಥೆ ಪ್ರತಿಮಾಮೂರ್ತಿ, ಮನೋವಿಜ್ಞಾನಿ ಪ್ರೊ. ಶ್ರೀಧರ್, ಸಿ.ಐ.ಡಿ. ಎಸ್.ಪಿ. ದೇವಸಿಂಗ್ ನಾಯ್ಕ್, ಮದ್ಯಪಾನ ಸಂಯಮ ಮಂಡಳಿಯ ಕಾರ್ಯದರ್ಶಿ ಚಂದ್ರಮೌಳೇಶ್ವರಸ್ವಾಮಿ ಅವರು ಸೇರಿದಂತೆ ಹಲವು ಅಧಿಕಾರಿಗಳು ಪಾಲ್ಗೊಂಡಿದ್ದರು.
ಮಮತಾ:ಜಿಪಿಆರ್.

# ರಫ್ತು-ಆಮದು ನಿರ್ವಹಣೆಯಲ್ಲಿ ಯೋಗ್ಯತಾ ಪತ್ರ ನೀಡಿಕೆ

ಬೆಂಗಳೂರು, ಜೂನ್ 26 (ಕರ್ನಾಟಕ ವಾರ್ತೆ)

ವಿಶ್ವೇಶ್ವರಯ್ಯ ವ್ಯಾಪಾರದ ಉತ್ತೇಜನ ಕೇಂದ್ರವು (ವಿಟಿಪಿಸಿ) ರಾಜ್ಯದಿಂದ ಅಂತರರಾಷ್ಟ್ರೀಯ ವ್ಯಾಪಾರವನ್ನು ಉತ್ತೇಜಿಸುವ ಕರ್ನಾಟಕದ ಒಂದು ನೋಡಲ್ ಏಜೆನ್ಸಿಯಾಗಿದ್ದು, ಭಾರತೀಯ ವಿದೇಶಿ ವ್ಯಾಪಾರ ಸಂಸ್ಥೆ (ಐಐಎಫ್‌ಟಿ) ನವದೆಹಲಿ, ಒಂದು ಸ್ವಾಯತ್ತ ಸಂಸ್ಥೆ, ಇದರ ಸಹಯೋಗದಲ್ಲಿ, 'ಹೊರಹೊಮ್ಮುವ ಎಕ್ಸಿಮ್ ಮಾರುಕಟ್ಟೆಗಳನ್ನು' ಎದುರಿಸಲು ರಫ್ತುದಾರರರನ್ನು ಸಜ್ಜುಗೊಳಿಸುವ ಸಲುವಾಗಿ ಎಕ್ಸಿಮ ನಿರ್ವಹಣೆಯ ಮೇಲೆ ಅಲ್ಪಾವಧಿ ಯೋಗ್ಯತಾ ಪತ್ರ ಕೋರ್ಸ್ ನಡೆಸುತ್ತಿದೆ.

ಈ ಕೋರ್ಸ್‌ಗೆ ಕರ್ನಾಟಕದಿಂದ ಆಯ್ಕೆಯಾದ ಅಭ್ಯರ್ಥಿಗಳಿಗೆ ಕೋರ್ಸ್ ಶುಲ್ಕದಲ್ಲಿ ಶೇ 50 ಮತ್ತು ಗರಿಷ್ಠ ರೂ 25,000/- ಮೀರದಂತೆ ಮರುಪಾವತಿ ಮಾಡಲಾಗುವುದು.

<u>ವಿದ್ಯಾರ್ಹತೆ</u>: ಅಂಗೀಕೃತ ವಿವಿಯಿಂದ ಪಡೆದ ಪದವಿ ಅಥವಾ ಡಿಪ್ಲೋಮಾ ಹಾಗೂ 2 ವರ್ಷಗಳ ಕಾರ್ಯಾನುಭವದೊಂದಿಗೆ. <u>ಆಯ್ಕೆಯ ವಿಧಾನ</u>: ಅಭ್ಯರ್ಥಿಗಳನ್ನು ತಮ್ಮ ಸ್ವವಿವರ/ವಿದ್ಯಾರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡುವುದು. ಅಗತ್ಯಬಿದ್ದಲ್ಲಿ ಆನ್‌ಲೈನ್ ಸಂದಾನ ನಡೆಸಲಾಗುವುದು. <u>ಕೋರ್ಸ್ ಶುಲ್ಕ</u>: ರೂ 75,000/- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ವಿಕಲಚೇತನ ಅಭ್ಯರ್ಥಿಗಳಿಗೆ ಶೇ 50 ರಷ್ಟು ರಿಯಾಯಿತಿ. <u>ಅವಧಿ :</u> 4 ತಿಂಗಳು. ವೇಳಾಪಟ್ಟಿ: ಸದರಿ ಕೋರ್ಸ್ ಐಐಎಫ್ ಟಿ, ನವದೆಹಲಿಯಲ್ಲಿ 4 ದಿನಗಳ ಕಾಂಬ್ಯಾಕ್ಟ್ ಸೆಷನ್ಸ್‌ನೊಂದಿಗೆ 10ನೇ ಸೆಪ್ಟೆಂಬರ್ 2015 ರಿಂದ ಆರಂಭವಾಗಲಿದೆ. ಉಳಿದ ಎಲ್ಲಾ ಸೆಷನ್‌ಗಳನ್ನು ಆನ್‌ಲೈನ್‌ನಲ್ಲಿ ನಡೆಸಲಾಗುವುದು. ನವದೆಹಲಿಗೆ ಈ ನಾಲ್ಕು ದಿನಗಳ ಸೆಷನ್‌ಗೆ ಹೋಗುವುದು ಕಡ್ಡಾಯವಲ್ಲ. <u>ಆನ್‌ಲೈನ್ ತರಗತಿಗಳನ್ನು ನಡೆಸುವ ಸ್ಥಳ:</u> ಇಂಟರ್ ನೆಟ್ ಸಂಪರ್ಕ ಇರುವ ಯಾವುದೇ ಸ್ಥಳ, ಮನೆ ಅಥವಾ ಕಚೇರಿ. ಕೋರ್ಸ್: ಯು.ಎಸ್.ಪಿ: ಎಲ್ಲಾ ತರಗತಿಗಳು ನೇರ ಪ್ರಸಾರವಾಗುತ್ತವೆ ಮತ್ತು ಎರಡೂ ಕಡೆಯ ಸಂವಹನಕ್ಕೆ ಸಹಕಾರಿಯಾಗುವಂತೆ ವ್ಯವಸ್ಥೆ ಮಾಡಲಾಗಿರುತ್ತದೆ. ಪರೀಕ್ಷೆ ಮತ್ತು ಪ್ರಮಾಣ ಪತ್ರ ವಿತರಣೆ: ಪ್ರಮಾಣ ಪತ್ರ ನೀಡಲು ಎಲ್ಲಾ ವಿಧಾನಗಳಲ್ಲೂ ಕನಿಷ್ಠ ಶೇ 50 ರಷ್ಟು ಅಂಕ ಗಳಿಸುವುದು ಕಡ್ಡಾಯ.

ಅರ್ಜಿಗಳನ್ನು ವೆಬ್‌ಸೈಟ್ www.vtpckarnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಎಲ್ಲಾ ವಿವರಗಳೊಂದಿಗೆ ಭರ್ತಿಮಾಡಿದ ಅರ್ಜಿಗಳನ್ನು ಕೆಳಗೆ ನಮೂದಿಸಿದ ವಿಳಾಸದಲ್ಲಿರುವ ಶ್ರೀ ಸಿ.ಎಸ್. ಭಾಸ್ಕರ್ (ಮೊ 9880958218) ರವರಿಗೆ ತಲುಪಿಸುವುದು. ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 05–08–2015.

ಹೆಚ್ಚಿನ ಮಾಹಿತಿಗಾಗಿ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರ, 3ನೇ ಮಹಡಿ, 'ಎ' ಬ್ಲಾಕ್, ಬಿ.ಎಂ.ಟಿ.ಸಿ ಕಾಂಪ್ಲೆಕ್ಸ್, ಶಾಂತಿನಗರ ಬೆಂಗಳೂರು – 560 027 ದೂರವಾಣಿ ಸಂಖ್ಯೆ : 080 – 22210622 ಇ–ಮೇಲ್ md@vtpckarnataka.gov.in ವೆಬ್‌ಸೈಟ್ www.vtpckarnataka.gov.in.

ಬಾಬು:ಜಿಪಿಆರ್.

# WEEKEND SESSIONS IN SCIENCE

Bangalore, June 26 (Karnataka Information)

Activity and discussion-based sessions in science will be held on Sundays between 10-30 am and 12-30 pm. Some of the concepts related to "OPTICAL ASTRONOMY" will be discussed with suitable experiments and solving problems.

Further details may be obtained from Jawaharlal Nehru Planetarium on 2237 9725/2226 6084 Or visit our website: http://www.taralaya.org/sow.php.

babu:gpr.

## ಡಾ: ಬಿ.ಟಿ. ಲಲಿತಾನಾಯಕ್‌ಗೆ ಸಂಗೋಳ್ಳಿ ರಾಯಣ್ಣ ಪ್ರಶಸ್ತಿ

**ಬೆಂಗಳೂರು, ಜೂನ್ 26 (ಕರ್ನಾಟಕ ವಾರ್ತೆ)**

ಹಿರಿಯ ಮಹಿಳಾ ಲೇಖಕಿ ಡಾ: ಬಿ.ಟಿ. ಲಲಿತಾನಾಯಕ್ ಅವರಿಗೆ ರಾಜ್ಯ ಸರ್ಕಾರವು 2014 ನೇ ಸಾಲಿನ ಸಂಗೋಳ್ಳಿ ರಾಯಣ್ಣ ಪ್ರಶಸ್ತಿಯನ್ನು ಪ್ರಕಟಿಸಿದೆ.

ಶಾಂತಲಾ ನಾಟ್ಯ ಪ್ರಶಸ್ತಿ ರಾಜ್ಯ ಸರ್ಕಾರವು 2014 ನೇ ಸಾಲಿನ ಶಾಂತಲಾ ನಾಟ್ಯ ಪ್ರಶಸ್ತಿಯನ್ನು ಮಂಗಳೂರಿನ ಮಾಸ್ಟರ್ ವಿಠ್ಠಲ ಶೆಟ್ಟಿ ಅವರಿಗೆ ನೀಡಲಿದೆ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.

ಬಾಬು/ಕೆಎಂ